ಕಥೆ 2

ಒಂದಾನೊಂದು ಕಾಲದಲ್ಲಿ, ಒಂದೂ ಊರಿನಲ್ಲಿ ವಾಸು ಮತ್ತು ಕಾವ್ಯ ಎಂಬ ಅಣ್ಣತಂಗಿಯರು ತಮ್ಮ ತಾಯಿಯೊಂದಿಗೆ ಇದ್ದರು. ಅವರ ಬಳಿ ಒಂದು ಬೆಕ್ಕು ಇತ್ತು. ವಸಂತ ಋತುವಿನ ಏಪ್ರಿಲ್ ತಿಂಗಳಿನಲ್ಲಿ ಆ ಬೆಕ್ಕು ಇದ್ದಕ್ಕಿದ್ದಂತೆ ಕಾಣೆಯಾಯಿತು. ಮಕ್ಕಳು ಎಲ್ಲಾ ಕಡೆ ಹುಡುಕಿದರೂ ಅದು ಸಿಗಲೇ ಇಲ್ಲ.

ಒಂದು ದಿನ, ಅವರು ಕೊಟ್ಟಿಗೆಯ ಬಳಿ ಆಡುತ್ತಿದ್ದಾಗ, ಅಟ್ಟದ ಮೇಲಿನಿಂದ 'ಮ್ಯಿಯಾವ್ ಮ್ಯಿಯಾವ್' ಎಂಬ ಕೂಗು ಕೇಳಿಸಿತು. ತಕ್ಷಣ ವಾಸು ಏಣಿ ಹತ್ತಿ ಅಟ್ಟದಲ್ಲಿ ಇಣುಕಿ ನೋಡತೊಡಗಿದ. ಕೆಳಗೆ ನಿಂತಿದ್ದ ಕಾವ್ಯ 'ನೋಡಿದ್ಯಾ? ಅವು ಸಿಕ್ಕಿದವಾ?' ಎಂದು ಕೇಳುತ್ತಿದ್ದಳು. ಮೊದಲು ಸ್ವಲ್ಪ ಹೊತ್ತು ಏನೂ ಉತ್ತರಿಸದಿದ್ದ ವಾಸು, ಒಮ್ಮೆಲೆ 'ಓ ಸಿಕ್ಕಿದವು. ಅದು ನಮ್ಮ ಬೆಕ್ಕು! ಅದು ಮರಿ ಹಾಕಿದೆ! ಎಷು ಮುದ್ದಾಗಿವೆ ಗೊತ್ತಾ? ಬೇಗ ಮೇಲೆ ಬಾ, ನೀನೂ ನೋಡುವೆಯಂತೆ' ಎಂದು ಸಂಭ್ರಮದಿಂದ ಕೂಗಿದ. ಮನೆಗೆ ಓಡಿದ ಕಾವ್ಯ ಸ್ವಲ್ಪ ಹಾಲನ್ನು ಬೆಕ್ಕಿಗಾಗಿ ತಂದಳು. ಅಲ್ಲಿ ಐದು ಮರಿಗಳಿದ್ದವು.

ಸ್ವಲ್ಪ ದಿನಗಳಲ್ಲಿ ಅವು ಬೆಳೆದು, ತಾವಿದ್ದ ಮೂಲೆಯಿಂದ ಹೊರ ಬಂದು ಆಡಲಾರಂಭಿಸಿದವು. ಆಗ, ಬಿಳಿಯ ಕಾಲುಗಳಿರುವ ಕಂದು ಬಣ್ಣದ ಮರಿಯನ್ನು ಮಕ್ಕಳು ಮನೆಗೆ ತಂದರು. ಅವರ ತಾಯಿ ಉಳಿದ ಮರಿಗಳನ್ನು ಬೇರೆಯವರಿಗೆ ಕೊಟ್ಟರು.

ಮಕ್ಕಳು ಬೆಕ್ಕಿನ ಮರಿಗೆ ಹಾಲು ಕುಡಿಸುತ್ತಿದ್ದರು. ಅದರೊಂದಿಗೆ ಆಟವಾಡುತ್ತಿದ್ದರು. ತಮ್ಮ ಹಾಸಿಗೆಯಲ್ಲಿಯೇ ಅದನ್ನು ಮಲಗಿಸಿಕೊಳ್ಳುತ್ತಿದ್ದರು. ಒಂದು ದಿನ ಮಕ್ಕಳು ಬೀದಿಯಲ್ಲಿ ಆಟವಾಡಲು ಹೋಗುವಾಗ, ತಮ್ಮೊಂದಿಗೆ ಬೆಕ್ಕಿನ ಮರಿಯನ್ನೂ ಕರೆದುಕೊಂಡು ಹೋದರು. ಜೋರಾಗಿ ಬೀಸುತ್ತಿದ್ದ ಗಾಳಿಯಲ್ಲಿ ಹಾರಿ ಬಂದ ಸ್ಟ್ರಾ ಒಂದರ ಜೊತೆ ಬೆಕ್ಕಿನಮರಿ ಆಟವಾಡುವುದನ್ನು ನೋಡಿ ನಗುತ್ತಿದ್ದರು.

ರಸ್ತೆಬದಿಯಲ್ಲಿ ಬೆಳೆದಿದ್ದ ಮಾವಿನ ಮರದಲ್ಲಿ ಕಾಯಿಗಳನ್ನು ಕೀಳುವುದರಲ್ಲಿ ಮಗ್ನರಾಗಿ, ಬೆಕ್ಕಿನಮರಿಯನ್ನು ಮರೆತುಬಿಟ್ಟರು. 'ಹೊ ಹೋ' ಎಂದು ಯಾರೊ ಕೂಗುವುದನ್ನು ಕೇಳಿ ಮಕ್ಕಳು ಹಿಂತಿರುಗಿ ನೋಡಿದಾಗ, ಬೇಟೆಗಾರನೊಬ್ಬನ ನಾಯಿಗಳು ಅಲ್ಲಿ ಬೆಕ್ಕಿನಮರಿ ಇರುವುದನ್ನು ಗಮನಿಸಿ ಅದನ್ನು ಹಿಡಿಯಲು ಓಡಿದವು. ಆತ ನಾಯಿಗಳ ಬೆನ್ನು ಹತ್ತಿ ಓಡುತ್ತಿದ್ದ. ಪಾಪ! ಆ ಬೆಕ್ಕಿನಮರಿ ಓಡಿಹೋಗುವುದನ್ನು ಮರೆತು, ಬೆನ್ನು ಬಾಗಿಸಿ ನಾಯಿಗಳನ್ನೇ ನೋಡುತ್ತಿತ್ತು!

ಎದುರಿಗೆ ಸಿಕ್ಕ ಕಾವ್ಯಳನ್ನು ನಾಯಿಗಳು ಭಯಪಡಿಸಿದವು. ಕಾವ್ಯ ಕೀರುತ್ತಾ ದೂರ ಓಡಿಹೋದಳು. ಆದರೆ, ವಾಸು ಬೆಕ್ಕಿನ ಮರಿಯ ಮೇಲೆ ಕವುಚಿ ಮಲಗಿ ನಾಯಿಗಳಿಂದ ಅದನ್ನು ರಕ್ಷಿಸಿದ. ಅಷ್ಟರಲ್ಲಿ ಬೇಟೆಗಾರ ಹತ್ತಿರ ಬಂದು ತನ್ನ ನಾಯಿಗಳನ್ನು ಹಿಡಿದುಕೊಂಡ. ಮಕ್ಕಳು ಬೆಕ್ಕಿನಮರಿಯನ್ನು ಮನೆಗೆ ಕರೆತಂದರು. ಮತ್ತೆಂದೂ ಬೀದಿಗೆ ಅದನ್ನು ಕರೆದುಕೊಂಡು ಹೋಗಲಿಲ್ಲ.